ಆರಂಭಕ್ಕೆ ಸಕ್ಕರೆಯ ತಲಾ ಸೇವನೆಯು ವರ್ಷಕ್ಕೆ 2 ಕಿಲೋ ಇದ್ದುದು, 21ನೇ ಶತಮಾನದ ಹೊತ್ತಿಗೆ ತಲಾ 70 ಕಿಲೋಗಳಷ್ಟಾಗಿದೆ; 1950ರಿಂದೀಚೆಗೆ ಲಘುಪೇಯಗಳ ಸೇವನೆಯು 5 ಪಟ್ಟು ಹೆಚ್ಚಿದೆ; ಇಂದು ಮಾರುಕಟ್ಟೆಯಲ್ಲಿ ಲಭ್ಯವಿರುವ ಆಹಾರಗಳಲ್ಲಿ ಶೇ. 75ರಷ್ಟು ಸಕ್ಕರೆಮಯವಾಗಿವೆ. ಇಪ್ಪತ್ತನೇ ಶತಮಾನದ ಮೊದಲಿಗೆ ಸಕ್ಕರೆ ಸೇವನೆ ತಲಾ 12 ಕಿಲೋ ಇದ್ದಾಗ ಲಕ್ಷಕ್ಕೆ ಮೂವರಿಗೆ ಮಧುಮೇಹವಿದ್ದರೆ, ಈಗ ಲಕ್ಷಕ್ಕೆ 8 ಸಾವಿರ ಜನ ಮಧುಮೇಹವನ್ನು ಹೊಂದಿದ್ದಾರೆ; 1980ರಲ್ಲಿ ಮಧುಮೇಹವುಳ್ಳವರ ಸಂಖ್ಯೆಯು 11 ಕೋಟಿಯಿದ್ದರೆ, 2014ರಲ್ಲಿ 42 ಕೋಟಿಯನ್ನು ದಾಟಿದೆ. ಹಾಗೆಯೇ, 2014ರ ವೇಳೆಗೆ ವಿಶ್ವದಾದ್ಯಂತ 18 ವರ್ಷಕ್ಕೆ ಮೇಲ್ಪಟ್ಟ ಶೇ. 39 ವಯಸ್ಕರು ಸ್ಥೂಲಕಾಯರಾಗಿದ್ದರು ಹಾಗೂ ಶೇ. 13ರಷ್ಟು ವಿಪರೀತ ದಢೂತಿಗಳಾಗಿದ್ದರು; 2015ರಲ್ಲಿ ಸುಮಾರು 4 ಕೋಟಿಯಷ್ಟು ಐದು ವರ್ಷದೊಳಗಿನ ಮಕ್ಕಳು ಬೊಜ್ಜನ್ನು ಬೆಳೆಸಿಕೊಂಡಿದ್ದರು, ಅವರಲ್ಲಿ ಶೇ. 48ರಷ್ಟು ಏಷಿಯಾದ ಮಕ್ಕಳೇ ಆಗಿದ್ದರು. ಇಂದು ಆರೋಗ್ಯಸೇವೆಗಳಿಗಾಗಿ ಮಾಡುತ್ತಿರುವ ವೆಚ್ಚಗಳಲ್ಲಿ ಶೇ. 75ರಷ್ಟು ಈ ಹೊಸರೋಗಗಳ ಚಿಕಿತ್ಸೆಗಳಿಗೇ ಸಲ್ಲುತ್ತಿವೆ. ರೋಗಕಾರಕ ಆಹಾರದ ಮಾರಾಟದಿಂದ ಲಕ್ಷ ಕೋಟಿಗಟ್ಟಲೆ ಲಾಭ, ಅವುಗಳಿಂದಾಗುವ ರೋಗಗಳ ಚಿಕಿತ್ಸೆಯಿಂದಲೂ ಲಕ್ಷ ಕೋಟಿಗಟ್ಟಲೆ ಲಾಭ. ಇದು ಭೂಲೋಕದ ಪ್ರಸಕ್ತ ನೀತಿ!

ದಿನಕ್ಕೆ ಒಂದು ಲೀಟರಿನಷ್ಟು ಸಕ್ಕರೆಭರಿತ ಪೇಯಗಳನ್ನು ಸೇವಿಸಿದರೆ ಮಧುಮೇಹ, ಬೊಜ್ಜು ಹಾಗೂ ಯಕೃತ್ತಿನಲ್ಲಿ ಕೊಬ್ಬು ಶೇಖರವಾಗುವ ಲಕ್ಷಣಗಳು ಗೋಚರಿಸುತ್ತವೆ ಎನ್ನುವುದೀಗ ಸಂಶಯಾತೀತವಾಗಿದೆ. ಹಾರ್ವರ್ಡ್ ವಿದ್ಯಾಲಯವು ಮೂರು ಲಕ್ಷ ಅಮೆರಿಕನ್ನರಲ್ಲಿ ನಡೆಸಿದ ಅಧ್ಯಯನಗಳು, ನಾರ್ವೆ ವಿಶ್ವವಿದ್ಯಾಲಯದಲ್ಲಿ 52,000 ವಯಸ್ಕರಲ್ಲಿ ನಡೆಸಲಾದ ಅಧ್ಯಯನ, ಆರು ಲಕ್ಷಕ್ಕೂ ಹೆಚ್ಚು ಜನರನ್ನೊಳಗೊಂಡಿದ್ದ 76 ಅಧ್ಯಯನಗಳ ಮಹಾವಿಮರ್ಶೆ, ಮೂರೂವರೆ ಲಕ್ಷ ಜನರನ್ನು 5–23 ವರ್ಷಗಳ ಕಾಲ ಗಮನಿಸಿದ್ದ 21 ಅಧ್ಯಯನಗಳ ಇನ್ನೊಂದು ವಿಮರ್ಶೆ ಇತ್ಯಾದಿಗಳಲ್ಲೂ 'ಕೊಬ್ಬಿನ ಆಹಾರ ಸೇವನೆಯಿಂದ ಹೊಸ ರೋಗಗಳು ಹೆಚ್ಚುವುದಿಲ್ಲ, ಬದಲಿಗೆ, ಬಗೆಬಗೆಯ ಸಕ್ಕರೆಭರಿತ ಆಹಾರಸೇವನೆಯಿಂದ ಹೆಚ್ಚುತ್ತವೆ' ಎನ್ನುವುದು ಸ್ಪಷ್ಟವಾಗಿದೆ.

ಜೀವಕಣಗಳೊಳಗೆ ನಡೆಯುವ ಜೀವರಾಸಾಯನಿಕ ಕ್ರಿಯೆಗಳು, ಅವುಗಳಲ್ಲಿ ಭಾಗಿಗಳಾಗುವ ಹಲವು ಬಗೆಯ ಸೂಕ್ಷ್ಮಗ್ರಾಹಿಗಳು, ಅವುಗಳನ್ನು ನಿಯಂತ್ರಿಸುವ ಹಲವು ತರದ ಹಾರ್ಮೋನುಗಳು ಇತ್ಯಾದಿಗಳ ಅತಿ ಸಂಕೀರ್ಣವಾದ ವ್ಯವಸ್ಥೆಯು ಅನಾವರಣಗೊಂಡಂತೆ, ನಮ್ಮ ಆಹಾರವು ಅದರ ಮೇಲೆ ವರ್ತಿಸುವ ಬಗೆಯೂ ಅರ್ಥವಾಗತೊಡಗಿದೆ. ಮನುಷ್ಯರು ಸಕ್ಕರೆ ಹಾಗೂ ಮೇದಸ್ಸುಗಳೆರಡರಿಂದಲೂ ಶಕ್ತಿಯನ್ನು ಪಡೆಯಬಹುದಾಗಿದ್ದು, ಸಕ್ಕರೆಗಳನ್ನೇ ಹೆಚ್ಚು ತಿಂದರೆ ಇಡೀ ಉಪಾಪಚಯವು ಏರುಪೇರಾಗಿ ದೇಹದ ಪ್ರತಿಯೊಂದು ವ್ಯವಸ್ಥೆಗೂ ತೊಂದರೆಯಾಗುತ್ತದೆ, ಹಲವು ವಿಷವರ್ತುಲಗಳನ್ನೇ ಸೃಷ್ಟಿಸುತ್ತದೆ. ಸಕ್ಕರೆಯ






# ಶ್ರೀ ಪಂಚಮುಖಿ ಜ್ಯೋತಿಷ್ಯಂ



INDIA'S MOST POPULAR ASTROLOGER

ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು

ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು–18.

ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ

ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.

ಬೆಂಗಳೂರು ಮೈಸೂರು 9880444450